ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/ 1209 /2026-27 ದಿನಾಂಕ:07.10.2026

ಜಿಲ್ಲಾ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೇ,

ವಿಷಯ: ರಾಷ್ಟ್ರಪತಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ಪ್ರೆಸಿಡೆಂಟ್ ಅವಾರ್ಡ್ ಸರ್ಟಿಫಿಕೇಟ್ ರಾಜ್ಯ ಮಟ್ಟದ ಪರೀಕ್ಷಾ ಶಿಬಿರವನ್ನು ಆಯೋಜಿಸಿರುವ ಬಗ್ಗೆ.

ರಾಷ್ಟ್ರಪತಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ಪ್ರೆಸಿಡೆಂಟ್ ಅವಾರ್ಡ್ ಸರ್ಟಿಫಿಕೇಟ್ ರಾಜ್ಯ ಮಟ್ಟದ ಪರೀಕ್ಷಾ ಶಿಬಿರವನ್ನು ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ದಿನಾಂಕ:27.10.2026 ರಿಂದ 31.10.2026ರವರೆಗೆ ಆಯೋಜಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

ಶಿಬಿರ	ರಾಷ್ಟ್ರಪತಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ಪ್ರೆಸಿಡೆಂಟ್ ಅವಾರ್ಡ್ ಸರ್ಟಿಫಿಕೇಟ್ ರಾಜ್ಯ ಮಟ್ಟದ ಪರೀಕ್ಷಾ ಶಿಬಿರ
ಸ್ಥಳ	ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ದಿನಾಂಕ	ದಿನಾಂಕ:27.10.2026 ರಿಂದ 31.10.2026ರವರೆಗೆ
ಹಾಜರಾಗುವ ದಿನಾಂಕ	ದಿನಾಂಕ:27.10.2026 ರಂದು ಬೆಳಗ್ಗೆ 8 ಗಂಟೆಯೊಳಗಾಗಿ ಕಡ್ಡಾಯವಾಗಿ ನೊಂದಣಿ ಮಾಡಿಕೊಳ್ಳುವುದು, ತಡವಾಗಿ ಬಂದಲ್ಲಿ ಶಿಬಿರದಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.
ಬಿಡುಗಡೆ ಮಾಡುವ ದಿನಾಂಕ	ದಿನಾಂಕ:31.10.2026 ರಂದು ಸಂಜೆ 5.30ರ ನಂತರ
ಶಿಬಿರ ಶುಲ್ಕ	ರೂ.1200/-
ಯಾರು ಭಾಗವಹಿಸಬಹುದು	ರಾಷ್ಟ್ರ ಸಂಸ್ಥೆಯಿಂದ ಆಯ್ಕೆಯಾದ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು, ಪಟ್ಟಿಯಲ್ಲಿ ಸೂಚಿಸಿರುವವರು ಮಾತ್ರ **ಸಂಪೂರ್ಣ ಸಿದ್ಧತೆಯೊಂದಿಗೆ ಭಾಗವಹಿಸುವುದು.**
ಕಡ್ಡಾಯವಾಗಿ ಶಿಬಿರಕ್ಕೆ ತರಬೇಕಾದ ಅಗತ್ಯಗಳು	1. ರಾಷ್ಟ್ರ ಸಂಸ್ಥೆಗೆ ಸಲ್ಲಿಸಿರುವ ತಮ್ಮ ಅರ್ಜಿ ನಮೂನೆ 2. ಸಮವಸ್ತ್ರದಲ್ಲಿರುವ ಪಾಸ್‌ಪೋರ್ಟ್ ಅಳತೆಯ 3 ಭಾವಚಿತ್ರ(ವೈಟ್ ಬ್ಯಾಗ್‌ಗ್ರೌಂಡ್) 3. ಭರ್ತಿ ಮಾಡಲಾದ ತಮ್ಮ ವೈಯಕ್ತಿಕ ಪ್ರೋಗ್ರೆಸ್ ಕಾರ್ಡ್ 4. ಕಂಪಾಸ್, ಬ್ಯಾಂಡೇಜ್ ಕ್ಲಾತ್, ಪ್ರಥಮ ಚಿಕಿತ್ಸಾ ಪೆಟ್ಟಿಗೆ 5. ಪ್ರಾವಿಣ್ಯತಾ ಪದಕಗಳಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕತೆಗಳಿಗೆ ಕಚ್ಚಾ ವಸ್ತು ಮತ್ತು ಅಗತ್ಯ ಪರಿಕರಗಳನ್ನು ತರುವುದು. 6. ಗಂಟು ಕಟ್ಟುವ ಹಗ್ಗ, ಸ್ಟೇವ್ಸ್ (ತಲಾ ಕನಿಷ್ಠ 2), ಪೆನ್, ಪರೀಕ್ಷಾ ಕಾರ್ಡ್‌ಗಳು, ಪ್ರಾವೀಣ್ಯತಾ ಬ್ಯಾಡ್ಜ್ ಪ್ರಮಾಣಪತ್ರಗಳು

	7. **ಸಂಪೂರ್ಣವಾಗಿ ಬರೆದಿರುವ ಲಾಗ್ ಪುಸ್ತಕ (ಪ್ರವೇಶದಿಂದ ರಾಷ್ಟ್ರಪತಿವರೆಗೆ)** 8. ಸ್ಕೌಟ್ಸ್‌ಗಳಿಗೆ APRO Part-II, ಗೈಡ್ಸ್‌ಗಳಿಗೆ APRO Part-III ಪ್ರಕಾರ ಸರಿಯಾದ ಹಾಗೂ ಸಂಪೂರ್ಣ ಸ್ಕೌಟ್/ಗೈಡ್ ಸಮವಸ್ತ್ರ (ಗೈಡ್ಸ್/ರೇಂಜರ್ಸ್‌ಗಳಿಗೆ ಸ್ಯಾಶ್ ಕಡ್ಡಾಯ) 9. ಬದಲಾಯಿಸಲು ಬೇಕಾದ ಬಟ್ಟೆಗಳು, ಹಗುರವಾದ ಹಾಸಿಗೆ ಸಾಮಗ್ರಿಗಳು, ತಟ್ಟೆ ಮತ್ತು ಲೋಟ/ಗ್ಲಾಸ್, ಟಾರ್ಚ್, ಬರವಣಿಗೆ ಸಾಮಗ್ರಿಗಳು, ಕ್ಯಾಂಪ್‌ಫೈರ್ ವೇಷಭೂಷಣ, ಸಂಗೀತ ವಾದ್ಯಗಳು (ಇದ್ದಲ್ಲಿ), ವೈಯಕ್ತಿಕ ಔಷಧಿಗಳು (ಅಗತ್ಯವಿದ್ದಲ್ಲಿ) ಹಾಗೂ ಇತ್ಯಾದಿ ಅಗತ್ಯ ವಸ್ತುಗಳನ್ನು ತರುವುದು.
ಪ್ರಯಾಣ ವೆಚ್ಚ ಮತ್ತು ಶಿಬಿರ ಶುಲ್ಕ	ಆಯಾಯ ಶಾಲಾ/ಕಾಲೇಜುಗಳ ಸ್ಕೌಟ್-ಗೈಡ್ ನಿಧಿಯಿಂದ ಭರಿಸಬಹುದು.
ಸಂಪರ್ಕಿಸಬೇಕಾದವರ ವಿವರ	ಶ್ರೀಮತಿ ಕುಮಾರಿ ಹೊನ್ನಮ್ಮ, ಪರೀಕ್ಷಾ ವಿಭಾಗ- 9342267389 ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ(ಸ್ಕೌ)- 9448914540 ಶ್ರೀಮತಿ ಮಂಜುಳ.ಸಿ, ಎಸ್.ಒ.ಸಿ(ಗೈ)- 9482433516

ಈ ಮೇಲಿನ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಓದಿ, ದಳನಾಯಕ/ನಾಯಕಿಯರುಗಳು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ರಾಷ್ಟ್ರಪತಿ ಪ್ರಶಸ್ತಿಗೆ ಅಗತ್ಯವಿರುವ ಪ್ರವೇಶದಿಂದ ರಾಷ್ಟ್ರಪತಿವರೆಗಿನ ಕೌಶಲ್ಯಗಳ ಮೌಖಿಕ, ಲಿಖಿತ, ಪ್ರಾಯೋಗಿಕವಾಗಿ ಎಲ್ಲಾ ಅಂಶಗಳಲ್ಲಿ ಶೇಕಡ ನೂರರಷ್ಟು ಕಲಿತು ಬರಲು ಮಕ್ಕಳನ್ನು ಸಿದ್ಧಪಡಿಸಲು ಹಾಗೂ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ದಳನಾಯಕರುಗಳೊಂದಿಗೆ ಶಿಬಿರಕ್ಕೆ ಭಾಗವಹಿಸುವಂತೆ ಸಂಘಟಕರುಗಳು ಮತ್ತು ಪದಾಧಿಕಾರಿಗಳು ಪ್ರೋತ್ಸಾಹಿಸಲು ವಿನಂತಿಸಿದೆ.

ಭಾಗವಹಿಸುವ ಬಗ್ಗೆ ರಾಜ್ಯ ಸಂಸ್ಥೆಗೆ ದಿನಾಂಕ:20.10.2026ರ ಒಳಗೆ ಒಪ್ಪಿಗೆ ತಿಳಿಸಿದವರು ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ. ತಿಳಿಸದೇ ಇದ್ದಲ್ಲಿ ನೇರವಾಗಿ ಶಿಬಿರಕ್ಕೆ ಭಾಗವಹಿಸುವವರನ್ನು ಪರಿಗಣಿಸಲಾಗುವುದಿಲ್ಲ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ವಿ.ಸೂ- ರಾಜ್ಯ ಮಟ್ಟದ ಪರೀಕ್ಷಾ ಶಿಬಿರದಲ್ಲಿ ಉತ್ತೀರ್ಣರಾದವರು ಮಾತ್ರ ರಾಷ್ಟ್ರೀಯ ಸಂಸ್ಥೆಯ ಆನ್‌ಲೈನ್ ರಾಷ್ಟ್ರಪತಿ ಮತ್ತು ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ಭಾಗವಹಿಸಲು ಅರ್ಹರಾಗುತ್ತಾರೆ.

ಅಡಕ: ರಾಷ್ಟ್ರೀಯ ಸಂಸ್ಥೆಯಿಂದ ಕಳುಹಿಸಲಾದ ಅರ್ಹ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳ ಪಟ್ಟಿ

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ